# ಚಿರ ಯುವಕರ ನಗೆ ಕೂಟ

ರಾಘವೇಂದ್ರರಾಜು ಕೆ. ಎಂ
ಪ್ರಯೋಗಾಲಯ ಬೋಧಕರು ಅಲಯನ್ಸ್ ವಿಶ್ವವಿದ್ಯಾಲಯ

ಭಾನುವಾರ ಸರಿಯಾಗಿ ಹತ್ತು ಗಂಟೆಗೆ ಸಂಜೀವಿ ಪಾರ್ಕ್ನಲ್ಲಿ ಲಾಫಿಂಗ್ ಕ್ಲಬ್ ಸದಸ್ಯರಾದ ಪಾಣಿ, ವೇಣು, ಸ್ವಾಮಿ, ಶರೀಫ್ ಹಾಗೂ ಲಿಲ್ಲಿ ಭೇಟಿಯಾಗುತ್ತಿದ್ದರು.

ಅಷ್ಟಕ್ಕೂ ಅದು ಅವರೇ ಮಾಡಿಕೊಂಡ ಚಿಕ್ಕದಾದ ಸದಸ್ಯ ಕೂಟ. ಹೀಗೆಯೆ ಪಾರ್ಕ್ನಲ್ಲಿ ವಾಕಿಂಗ್ ಬಂದಾಗ ನಡೆದು ಸುಸ್ತಾಗಿ ಒಂದೆ ಕಡೆ ಕುಳಿತ ಐವರೂ ಒಬ್ಬರಿಗೊಬ್ಬರು ಮಾತನಾಡುತ್ತಾ ಮಾತಿನ ಚಕಮಕಿ ನಡೆದು ಹುಟ್ಟಿಕೊಂಡದ್ದೆ ಈ ಲಾಫಿಂಗ್ ಕ್ಲಬ್.

ಅದರ ಹೆಸರೇನೆಂದರೆ "ಚಿರ ಯುವಕರ ನಗೆ ಕೂಟ".

ವಯಸ್ಸು ದೇಹಕ್ಕೆ ಹೊರತು ಮನಸ್ಸಿಗಲ್ಲ. ನಾವು ಯಾವಾಗಲೂ ಚಿಲುಮೆಯ ನವ ಯುವಕರು ಎನ್ನುವುದು ಅವರೆಲ್ಲರ ಒಮ್ಮತವಾದರೂ ಅವರೆಲ್ಲರ ವಯಸ್ಸು ಅರವತ್ತು ದಾಟಿತ್ತು ಎನ್ನುವುದು ವಿಶೇಷ

ಪ್ರತಿ ಭಾನುವಾರ ತಪ್ಪದೆ ಹತ್ತು ಗಂಟೆಗೆ ಎಲ್ಲಾರೂ ಹಾಜರಾಗಿ ಮಧ್ಯಾಹ್ನ ಒಂದು ಗಂಟೆಯವರೆಗೂ ಸಾಕಷ್ಟು ಜೋಕುಗಳನ್ನು ಹನಿಗವನಗಳನ್ನು ಹಂಚಿಕೊಂಡು ನಂತರ ಅವರವರ ಮನೆಗೆ ತೆರಳುತ್ತಿದ್ದರು.

ಅವರ ಗ್ರೂಪ್ ನಲ್ಲಿದ್ದ ಬಹು ಮುಖ್ಯವಾದ ಕಂಡಿಷನ್ ಏನೆಂದರೆ "ಯಾರೊಬ್ಬರೂ ಸಹ ತಮ್ಮ ಹಿನ್ನೆಲೆ ಅಥವಾ ಮನೆಯ ವಿವರಗಳನ್ನು ಹಂಚಿಕೊಳ್ಳುವ ಹಾಗಿಲ್ಲ" ಎಂಬುದು.

ಪ್ರತಿ ಭಾನುವಾರ ತಪ್ಪದೆ "ಚಿರ ಯುವಕರ ನಗೆ ಕೂಟ"ಕ್ಕೆ ಬರಬೇಕು ಹಾಗೆಯೆ ಹೊರಗಿನ ಎಲ್ಲ ಚಿಂತೆಯನ್ನು ಬರುವಾಗ ದಾರಿಯಲ್ಲೇ ಬಿಟ್ಟು ಇಲ್ಲಿ ಎಲ್ಲರ ಜೊತೆ ಸೇರಿ ಸಂತೋಷದಿಂದ ನಕ್ಕು ಖುಷಿಯನ್ನು ಮಾತ್ರ ಮನೆಗೆ ತೆಗೆದುಕೊಂಡು ಹೋಗಬೇಕು ಎಂಬುದು.

ಎಂದಿನಂತೆ ಈ ಭಾನುವಾರ ಕೂಡ ಎಲ್ಲರೂ ತರಾತುರಿಯಲ್ಲಿ ರೆಡಿಯಾಗಿ ಪಾರ್ಕಿಗೆ ಬಂದರು.

ಎಲ್ಲರಿಗಿಂತ ಮೊದಲು ಬರುತ್ತಿದ್ದ ವೇಣು ಅಲ್ಲಿ ಕಾಣಲಿಲ್ಲ. ಅಷ್ಟರಲ್ಲಿ ಅವರ ಬಳಿ ಬಂದ ವ್ಯಕ್ತಿಯೊಬ್ಬ ಒಬ್ಬೊಬ್ಬರ ಕೈಗೂ ಒಂದೊಂದು ಪತ್ರವನ್ನು ಕೊಟ್ಟು ಬಿಡಿ ಬಿಡಿಯಾಗಿ ಓದಬೇಕು. ಒಬ್ಬರಿಗೊಬ್ಬರು ಈ ಪತ್ರದಲ್ಲಿ ಏನಿದೆ ಎನ್ನುವುದನ್ನು ಹಂಚಿಕೊಳ್ಳಬಾರದು ಎನ್ನುವ ಷರತ್ತಿನ ಮೇಲೆ ಪತ್ರವನ್ನು ಕೊಟ್ಟು ಹೊರಟು ಹೋದ.

ಪ್ರತಿಯೊಬ್ಬರ ಹೆಸರಿನ ಮೇಲೂ ಒಂದೊಂದು ಪತ್ರವಿತ್ತು.

**ಲಿಲ್ಲಿ, ಪಾಣಿ, ಶರೀಫ** ಹಾಗೂ **ಸ್ವಾಮಿ** ಆ ಪತ್ರವನ್ನು ತೆರೆದು ಓದಲು ಶುರು ಮಾಡಿದರು ಇದರ ಅರ್ಥ ಪತ್ರ ಕಳಿಸಿದ್ದು ವೇಣುವಾಗಿದ್ದರು."**ಮೈ ಡಿಯರ್ ಯಂಗ್ ಬಾಯ್ಸ್ ಹಾಗೂ ಲಿಲ್ಲಿಗೆ ಯಂಗ್ ಗರ್ಲ್**" ಎಂದು ಉಲ್ಲೇಖಿಸಿ ಪತ್ರವನ್ನು ಪ್ರಾರಂಭಿಸಿದ್ದರು.

"ಇಂದಿನ ನಗೆ ಕೂಡ ಎಂದಿನಂತೆ ನಗುವಿನಿಂದ ಕೂಡಿರಬೇಕು. ಪ್ರತಿಯೊಬ್ಬರೂ ಕನಿಷ್ಠ ಪಕ್ಷ ಹತ್ತು ಜೋಕುಗಳನ್ನು ಹೇಳದೆಪಾರ್ಕಿನಿಂದ ಹೊರಗೆ ಹೋಗುವಂತಿಲ್ಲ" ಎನ್ನುವ ಸೂಚನೆಯ ಮೇರೆಗೆ ಪತ್ರದ ಮುಂದಿನ ಭಾಗ ಮುಂದುವರೆದಿತ್ತು.

ಲಿಲ್ಲಿಗೆ,

ಹಾಯ್ ಲಿಲ್ಲಿ, ನಾನಂತೂ ಇಲ್ಲಿ ಕ್ಷೇಮ ಅಂದುಕೊಂಡಿದ್ದೇನೆ ಆದರೆ ಇನ್ನೂ ವ್ಯವಸ್ಥೆ ಸರಿಯಾಗಿ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಎಲ್ಲ ಸರಿಯಾಗಿದ್ದರೂ ಇಲ್ಲದಿದ್ದರೂ ಹೇಳುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣದಿಂದಲೇ ಈ ಪತ್ರ ಬರೆದದ್ದು.

ಇಲ್ಲಿ ನನ್ನ ಹೆಂಡತಿ ಕೂಡ ಇದ್ದಾಳೆ. ಅಪ್ಪಿ ತಪ್ಪಿ ಕೂಡ ನೀನು ಇತ್ತ ಕಡೆ ಬರಬೇಡ ಮೊದಲೇ ಅವಳಿಗೆ ನನ್ನ ಮೇಲೆ ಅನುಮಾನ ಜಾಸ್ತಿ, ನಿನ್ನ ಮೇಲೂ ಕೂಡ, ಎನ್ನುವುದನ್ನು ಓದಿದಾಗ ಲಲ್ಲಿಯ ಮುಖದಲ್ಲಿ ನಗು ಅರಳಿತು.

ನಗುತ್ತಲೇ ಪತ್ರ ಓದುವುದನ್ನು ಮುಂದುವರೆಸಿದಳು ಲಲ್ಲಿ.

"ನಿನಗೆ ನೆನಪಿದೆಯಾ? ಅದೇ ಪಾರ್ಕಿನಲ್ಲಿ ನಾನು ದುಷ್ಯಂತ ಹಾಗೂ ನೀನು ಶಕುಂತಲೆಯ ಪಾತ್ರವನ್ನು ಮಾಡಿದ್ದೆವು. ಆಗ ತೆಗೆದ ಒಂದಷ್ಟು ಫೋಟೋವನ್ನು ನನ್ನ ಹೆಂಡತಿಗೆ ತೋರಿಸಿದ್ದೆ ಆಗ ಅವಳು ಏನೆಂದಿದ್ದಳು ಗೊತ್ತೇ?"

"ಏನೆಂದರು?" ಎಂದು ಸ್ವಗತದಲ್ಲಿ ಕೇಳಿದಳು ಲಿಲ್ಲಿ.

"ಹಲ್ಲಿಲ್ಲದ ದುಷ್ಯಂತ ನೀವೊಬ್ಬರೇ ಹಾಗೆ ಕೂದಲಿಲ್ಲದ ಶಕುಂತಲೆ ಆಕೆ ಮಾತ್ರ" ಎನ್ನುವಾಗ ಮೊದಲಿಗೆ ನಗು ಬಂದರೂ ಆಕೆ ತನಗೆ ಈ ರೀತಿ ಹೇಳಿದ್ದಳೆ? ಎಂದು ಲಲ್ಲಿಯ ಮುಖದಲ್ಲಿ ಕೋಪಗೊಂಡಿತು.

"ನನಗೆ ಗೊತ್ತು ಈ ಪತ್ರವನ್ನು ಓದುವಾಗ ನಿನಗೆ ಖಂಡಿತ ನನ್ನ ಹೆಂಡತಿಯ ಮೇಲೆ ಕೋಪ ಬರುತ್ತದೆ ಎಂದು ಆದರೆ ಈಗ ಅವಳಿಲ್ಲವಲ್ಲ ಅದಕ್ಕೆ ಕ್ಷಮಿಸಿ ಬಿಡು" ಎಂದು ಪತ್ರ ಮುಂದುವರೆದಿತ್ತು.

"ಸರಿ ನಿನಗಾಗಿ ಕ್ಷಮಿಸುತ್ತಿದ್ದೇನೆ" ಎಂದು ಮತ್ತೆ ಸ್ವಗತದಲ್ಲಿ ಹೇಳಿಕೊಂಡಳು ಲಿಲ್ಲಿ.

ನನ್ನ ಹೆಂಡತಿಗೆ ಎಷ್ಟು ಅನುಮಾನ ಎಂದರೆ ಅಕಸ್ಮಾತ್ ನಾನು ಹೆಚ್ಚಿನ ಪಾಪದಿಂದ ನರಕಕ್ಕೆ ಹೋದರೂ ಬಿಡದೆ ನನ್ನ ಹಿಂದೆಯೇ ಬರುತ್ತಾಳೆ ಏಕೆಂದರೆ ಅಲ್ಲಿಯೂ ಯಾವುದಾದರೂ ಯಮಕಿಂಕರಿಗೆ ನಾನು ಕಾಳು ಹಾಕುತ್ತಿರಬಹುದು ಎನ್ನುವ ಗುಮಾನಿಯಿಂದ ಎನ್ನುವ ವಾಕ್ಯವನ್ನು ಓದಿದ ಲಿಲ್ಲಿ ಎರಡು ನಿಮಿಷಗಳ ಕಾಲ ಜೋರಾಗಿ ನಕ್ಕಳು. ನಂತರ ಓದನ್ನು ಮುಂದುವರೆಸಿದಳು.

ನಿನ್ನ ಜೋಸೆಫ್ ಕೂಡ ನಿನಗಾಗಿ ಕಾಯುತ್ತಿರುತ್ತಾನೆ. ನೀವಿಬ್ಬರೂ ಆದರ್ಶ ದಂಪತಿಗಳು. ನಿನ್ನ ಮುಖದ ಮೇಲಿನ ನಗು ಮಾಸದೆ ಇರಲಿ ಎನ್ನುವಲ್ಲಿಗೆ ಪತ್ರ ಮುಗಿದಿತ್ತು.

***

ಪಾಣಿಗೆ,

ಸತ್ಯ ಹೇಳಬೇಕು ಅಂದ್ರೆ ನೀನೊಬ್ಬ ಲಕ್ಷ್ಮಣನಂತೆ. ನನ್ನ ನಂತರ ನಗೆ ಕೂಟದ ಮುಖ್ಯಸ್ಥ ನೀನಾಗಬೇಕು. ನೀನೆ ಎಲ್ಲರಿಗೂ ಒಂದೊಂದು ವಿಷಯ ಕೊಟ್ಟು ಅದರ ಮೇಲೆ ಜೋಕುಗಳನ್ನು ಹೇಳಲು ಹುರಿದುಂಬಿಸಬೇಕು.

ತ್ರೇತಾಯುಗದ ರಾಮನಂತೆ ನಾನಾದರೆ ಬೆಂಬಿಡದೆ ಕಾವಲಿಗನಾಗಿ ಹಿಂದೆ ಬರುವ ಲಕ್ಷ್ಮಣ ನೀನು. ಆದರೂ ಕೊಂಚ ಲಕ್ಷಣ ಕಡಿಮೆ ಎನ್ನುವ ವಾಕ್ಯವನ್ನು ಓದುವಾಗ ಪಾಣಿಗೆ ನಗು ಬಂತು.

ಅಪ್ಪಿ ತಪ್ಪಿ ಲಿಲ್ಲಿಯನ್ನು ಶೂರ್ಪನಖಿ ಎಂದುಕೊಂಡು ಮೂಗು ಕತ್ತರಿಸಬೇಡ. ಎನ್ನುವ ವಾಕ್ಯವನ್ನು ಓದುವಾಗಲಂತೂ ನಗುವಿಗೆ ಪಾಣಿ ಕಣ್ಣಲ್ಲಿ ನೀರು ಬಂತು. ಸಾವರಿಸಿಕೊಂಡು ಓದನ್ನು ಮುಂದುವರೆಸಿದ ಪಾಣಿ.

ಹಾಗೆ ಹೊಸ ಸದಸ್ಯರು ಬೇಕಾದಲ್ಲಿ ಸೇರಿಸಿಕೊ. ಆದರೆ ಎಂದಿಗೂ ನಮ್ಮ ನಗುವಿನ ಕೇಕೆ ನಿಲ್ಲಬಾರದು. ನಿಜಕ್ಕೂ ನೀನೊಬ್ಬ ಉತ್ತಮ ಪ್ರೋತ್ಸಾಹಕ. ಒಳ್ಳೆಯದಾಗಲಿ ಎನ್ನುವಲ್ಲಿಗೆ ಪತ್ರ ಮುಗಿದಿತ್ತು.

***

ಸ್ವಾಮಿಗೆ,

ಪಾಣಿ ನನಗೆ ತಮ್ಮನ ಸ್ಥಾನ ತುಂಬಿದರೆ ನೀನು ಮಾತ್ರ ಎಂದಿಗೂ ಅಳಿಯದ ಜೀವದ ಗೆಳೆಯ. ಕ್ಷಣಾರ್ಧದಲ್ಲಿ ನಗೆ ಚಟಾಕಿಯನ್ನು ಹಾರಿಸುವ ನಿನ್ನ ವಿವೇಚನಾ ಶಕ್ತಿಗೆ ನನ್ನದೊಂದು ಸಲಾಂ.

ಒಂದು ರೀತಿಯಲ್ಲಿ ಹೇಳಬೇಕು ಅಂದರೆ ನನಗೆ ಪೈಪೋಟಿ ನೀಡುವ ಮನುಷ್ಯ ಅಂದ್ರೆ ನೀನೊಬ್ಬನೇ. ನಮ್ಮ ನಗೆ ಕೂಟದ ರೂಲ್ಸ್ ಮರೆತು ವಯಕ್ತಿಕ ವಿಷಯವನ್ನು ಹಂಚಿಕೊಂಡವ ನೀನು ಮಾತ್ರ. ಅದರಲ್ಲೂ ನನ್ನ ಬಳಿಯಲ್ಲಿ. ಈ ವಿಷಯವನ್ನು ಮತ್ಯಾರಲ್ಲಾದರೂ ಹೇಳಲು ಹೋಗಬೇಡ. ಕಷ್ಟಗಳು ಮಾನವನಿಗೆ ಬರದೆ ಮರಕ್ಕೆ ಬರುತ್ತವೆಯೇ? ನಿನಗೂ ಒಳ್ಳೆಯ ಸಮಯ ಬರುತ್ತದೆ.

ಹೊಸ ನಾಟಕಕ್ಕೆ ಸಂಭಾಷಣೆ ಬರಿ ಹೇಗಿರಬೇಕು ಎಂದರೆ ವಯಸ್ಸಾದವರೂ ನಕ್ಕು ನಕ್ಕು ಅಲ್ಲಿಯೇ ಸಾಯಬೇಕು. ಆ ರೀತಿ ಬರೆಯಬೇಕು. ಮುಂಬರುವ ನಾಟಕದ ಹೊಣೆ ನಿನ್ನದು. ಶುಭವಾಗಲಿ ಎನ್ನುವಲ್ಲಿಗೆ ಪತ್ರ ಮುಗಿದಿತ್ತು.

***

ಶರೀಫನಿಗೆ,

ನೀನು ನನ್ನ ಆಜನ್ಮ ಶತ್ರು ಕಣಯ್ಯ. ನನಗೆ ಕಾಂಪಿಟೇಟ್ ಕೊಡೋನು ಅಂದ್ರೆ ನೀನೊಬ್ಬನೆ.

ಹಿಂದೆ ದುಷ್ಯಂತನ ಪಾತ್ರ ನಾನು ಮಾಡಬೇಡು ಅಂದಾಗ ಹಠ ಹಿಡಿದು ನೀನೆ ಮಾಡ್ಬೇಕು ಅಂದೆ ಆದರೆ ಲಿಲ್ಲಿ ಬಂದು ನಾನು ಆ ಪಾತ್ರ ಮಾಡಿದರೆ ಮಾತ್ರ ಅವಳು ಶಕುಂತಲೆ ಪಾತ್ರ ಮಾಡುತ್ತೇನೆ ಎಂದಾಗ ಸುಲಭವಾಗಿ ಬಿಟ್ಟುಕೊಟ್ಟೆ.

ಅಕಸ್ಮಾತ್ ನಾನೇನಾದರೂ ರಾಮಾಯಣ ನಾಟಕ ಮಾಡಿದ್ದರೆ, ಅದರಲ್ಲಿ ನಾನೆ ರಾಮ ಲಿಲ್ಲಿನೆ ಸೀತೆ ಹಾಗೂ ನೀನೆ ರಾವಣ. ಗಾತ್ರದಲ್ಲಿ ನನಗಿಂತ ಒಂದು ಕೈ ಹೆಚ್ಚಿರುವ ಕಾರಣ ಬಹುಶಃ ಮೊದಲ ಬಾರಿಗೆ ರಾವಣ ರಾಮನನ್ನು ಹೊಡೆದು ಸೀತೆಯನ್ನು ಎಲ್ಲರ ಮುಂದೆ ಧೈರ್ಯವಾಗಿ ಹೊತ್ತುಕೊಂಡು ಹೋದ ಎನ್ನುವ ಇತಿಹಾಸ ನೀನೆ ಸೃಷ್ಟಿ ಮಾಡುತ್ತಿದ್ದೆ ಅನ್ನಿಸುತ್ತದೆ ಎನ್ನುವಾಗ ಶರೀಫನ ಕೈ ಮೀಸೆ ಮೇಲೆ ಹೋಯಿತು ಹಾಗೂ ತುಟಿಯಂಚಿನಲ್ಲಿ ನಗು ಮೂಡಿತು.

ನಗೆ ಕೂಟದ ಪ್ರತಿ ನಿಯಮವನ್ನು ಎಲ್ಲಾರೂ ಪಾಲಿಸುವಂತೆ ನೀನು ನೋಡಿಕೊಳ್ಳಬೇಕು. ಒಳ್ಳೆಯದಾಗಲಿ ಎನ್ನುವಲ್ಲಿಗೆ ಪತ್ರ ಮುಗಿದಿತ್ತು.

ನಾಲ್ವರೂ ಸ್ನೇಹಿತರು ಪತ್ರವನ್ನು ಹಿಂದೆ ತಿರುಗಿಸಿ ಓದಿದಾಗ ಅಲ್ಲಿ ಹೀಗೆ ಬರೆದಿತ್ತು.

"ನನ್ನ ಪಯಣ ಮುಗಿದು ಬಹುಶಃ ತುಂಬಾ ದಿನವಾಗಿರುತ್ತದೆ. ಇನ್ನು ಮುಂದೆ ನಾನು ಕೂಟದಲ್ಲಿ ಭಾಗವಹಿಸಲು ಸಾಧ್ಯವಾಗುವುಲ್ಲ. ಇದರ ಒಳಾರ್ಥವನ್ನು ನಾನು ಬಿಡಿಸಿ ಹೇಳುವುದೇನು ಬೇಡ ನಿಮಗೆ ಅರ್ಥವಾಗಿರುತ್ತದೆ ಎಂದು ಭಾವಿಸುತ್ತೇನೆ".

ಅಲ್ಲಿ ನನಗಾಗಿ ನನ್ನ ಹೆಂಡತಿ ಸುಮತಿ ಕಾಯುತ್ತಿದ್ದಾಳೆ. ಅವಳನ್ನು ಸೇರಲು ಹೋಗುತ್ತಿದ್ದೇನೆ. ಇಂದಲ್ಲ ನಾಳೆ ನೀವು ಇಲ್ಲಿಗೆ ಬಂದೆ ಬರುತ್ತೀರಾ ಎಂದು ನನಗೆ ಚೆನ್ನಾಗಿ ಗೊತ್ತು. ನಿಮಗೆ ಆತ್ಮೀಯ ಸ್ವಾಗತವನ್ನು ನಾನು ಇಲ್ಲಿ ಮಾಡುತ್ತೇನೆ.

**ಮೈ ಡಿಯರ್ ಬಾಯ್ಸ್ ಅಂಡ್ ಗರ್ಲ್** ಕೊನೆಯದಾಗಿ ಒಂದು ಮಾತನ್ನು ನಡೆಸಿಕೊಡುತ್ತಿರ? ಎನ್ನುವ ವಾಕ್ಯವನ್ನು ಓದುವಾಗಲೇ ಎಲ್ಲರ ಕಣ್ಣಂಚು ಒದ್ದೆಯಾಗಿತ್ತು.

"ನಾನು ಇಲ್ಲ ಎನ್ನುವ ಕಾರಣಕ್ಕೆ ನೀವ್ಯಾರೂ ಅಳಬಾರದು" ನಿಮ್ಮ ಕಣ್ಣಿಂದ ಒಂದು ಹನಿ ನೀರು ಬಂದರೂ ನನ್ನಾಣೆ! ನಾನು ನಿಮ್ಮನ್ನು ನೋಡಿದಷ್ಟು ದಿನ ಮಾತನಾಡಿದಷ್ಟು ಸಮಯ ನಗುವನ್ನೇ ಹಂಚಿದ್ದೇನೆ. ಖುಷಿಯನ್ನೇ ನಿಮ್ಮಲ್ಲಿ ಕಂಡಿದ್ದೇನೆ. ಈಗ ನಾನಿಲ್ಲ ಎನ್ನುವ ಕಾರಣಕ್ಕೆ ನೀವು ಅತ್ತರೆ ಅದು ನನಗೆ ಮತ್ತಷ್ಟು ನೋವು ಮಾಡುತ್ತದೆ. ಇದರ ಬದಲು ಇಂದು ನಿಗದಿಗಿಂತ ಹೆಚ್ಚಿನ ಜೋಕುಗಳನ್ನು ಹೇಳಿ ನಿಮ್ಮ ಮಗುವಿನ ಅಲೆಯ ಮೂಲಕ ನಾನಿರುವ ಜಾಗದವರೆಗೂ ನಿಮ್ಮ ನಗುವಿನ ಶಬ್ದ ಕೇಳುವಂತೆ ಮಾಡಿ. ಇಲ್ಲೇ ಕೂತು ನಿಮ್ಮ ಜೋಕನ್ನು ನಾನು ಆಲಿಸುತ್ತಿರುತ್ತೇನೆ.

ಇಂತಿ ನಿಮ್ಮ **ವೇಣು**

ಪತ್ರವನ್ನು ಓದಿ ಮುಗಿಸಿದ ಪ್ರತಿಯೊಬ್ಬರೂ ಕ್ಷಣಕಾಲ ಮೌನ ವಹಿಸಿದರು. ನಂತರ ಎಲ್ಲರೂ ಒಂದು ಕಡೆ ಬಂದು ಸೇರಿದರು.

ಪತ್ರದಲ್ಲಿ ಏನಿದೆ ಎನ್ನುವುದನ್ನು ಯಾರೂ ಹಂಚಿಕೊಳ್ಳುವ ಹಾಗಿಲ್ಲ ಎನ್ನುವ ಷರತ್ತು ಇದ್ದ ಕಾರಣ ಯಾವುದೇ ವಿಷಯವನ್ನು ಹೇಳಲಿಲ್ಲ.

**"ಚಿರ ಯುವಕರ ನಗೆ ಕೂಟ"** ಕಾರ್ಯಕ್ರಮ ಶುರುವಾಯಿತು.

**ಲಿಲ್ಲಿ, ಪಾಣಿ, ಸ್ವಾಮಿ** ಹಾಗೂ **ಶರೀಫ** ಎಂದಿಗಿಂತ ಇಂದು ಹೆಚ್ಚಿನ ಜೋಕುಗಳನ್ನು ಹೇಳಿದರು.

ಅವರ ನಗುವಿನ ಅಲೆ ಆಗಸದಲ್ಲಿ ತೇಲಿತು.